ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 18/3/2020

# ಆಯ್ದ ಬೋಧಕ ವರ್ಗಕ್ಕಷ್ಟೇ ಯುಜಿಸಿ ಅನ್ವಯ ಪಿಂಚಣಿ

**2006 ಜ.1ರ ಬಳಿಕ ನಿವೃತ್ತರಾದವರಿಗೆ ಯುಜಿಸಿ ವೇತನ ಶ್ರೇಣಿಯ ಪಿಂಚಣಿ**

**ರಾಜ್ಯ ವಿಧಾನಸಭೆಯಲ್ಲಿ ವಿಧೇಯಕಕ್ಕೆ ಒಪ್ಪಿಗೆ**

ವಿಧಾನಸಭೆ: ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಕಳೆದ 2006ರ ಜ.1ರ ಬಳಿಕ ನಿವೃತ್ತರಾದ ಬೋಧಕ ವರ್ಗದವರಿಗಷ್ಟೇ ಯುಜಿಸಿ ವೇತನ ಶ್ರೇಣಿಯನ್ವಯ ಪಿಂಚಣಿ ಸೌಲಭ್ಯ ಒದಗಿಸುವ ಸಂಬಂಧ ಕರ್ನಾಟಕ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೇತನ ಮತ್ತು ನಿವೃತ್ತಿ ವೇತನ (ನಿಯಂತ್ರಣ) ವಿಧೇಯಕಕ್ಕೆ ಮಂಗಳವಾರ ಒಪ್ಪಿಗೆ ನೀಡಲಾಯಿತು.

ಜತೆಗೆ, ಇದೇ ವಿಧೇಯಕದ ಅನ್ವಯ 2006ರ ಜ.1ರ ಮೊದಲು ನಿವೃತ್ತರಾದವರು ಹಾಗೂ ಉಳಿದ ಸರ್ಕಾರಿ ನೌಕರರಿಗೂ ಇದೇ ರೀತಿಯ ಪಿಂಚಣಿ ಸೌಲಭ್ಯ ನೀಡುವುದನ್ನು ನಿರಾಕರಿಸಲಾಗುತ್ತದೆ.

ಮಂಗಳವಾರ ವಿಧೇಯಕ ಕುರಿತು ಮಾಹಿತಿ ನೀಡಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, 2006ರ ಜ.1ರ ಬಳಿಕ ನಿವೃತ್ತರಾದವರಿಗೆ ಯುಜಿಸಿ ವೇತನ ಶ್ರೇಣಿಯನ್ವಯ ಪಿಂಚಣಿ ಸೌಲಭ್ಯ ಕಲ್ಪಿಸಲಾಗಿತ್ತು. ಆದರೆ 2006ರ ಜ.1ಕ್ಕೆ ಮೊದಲು ನಿವೃತ್ತರಾದವರಿಗೂ ಈ ಸೌಲಭ್ಯ ಕಲ್ಪಿಸಬೇಕೆಂದು ಕೋರಿ ಕೆಲವರು ಕೋರ್ಟ್ ಮೊರೆ ಹೋಗಿದ್ದರು. ಅದರಂತೆ ನ್ಯಾಯಾಲಯ ಅವರಿಗೂ ಯುಜಿಸಿ ವೇತನ ಶ್ರೇಣಿಯಂತೆ ಪಿಂಚಣಿ ನೀಡುವಂತೆ ಸೂಚಿಸಿತ್ತು. ಇದನ್ನು ಜಾರಿಗೊಳಿಸಲು ಸಾಧ್ಯವಾಗದ ಕಾರಣ ಸುಗ್ರೀವಾಜ್ಞೆ ಹೊರಡಿಸುವ ಮೂಲಕ 2006ರ ಜ.1ಕ್ಕೆ ಮೊದಲು ನಿವೃತ್ತರಾದವರಿಗೆ ಯುಜಿಸಿ ವೇತನ ಶ್ರೇಣಿಯಂತೆ ಪಿಂಚಣಿ ಸೌಲಭ್ಯ ಕಲ್ಪಿಸುವುದನ್ನು ರದ್ದುಪಡಿಸಲಾಗಿತ್ತು. ಅದಕ್ಕೆ ಪೂರಕವಾಗಿ ವಿಧೇಯಕ ಮಂಡನೆಯಾಗಿದೆ ಎಂದರು.